3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.431/2018**

ಪ್ರಾ.ಸಾ 7

ಚಾಸಾ 9

| | |
|---|---|
| ಹೆಸರು | ಶ್ರೀಕಂಠಯ್ಯ ಕೆ.ಎಂ |
| ತಂದೆಯ ಹೆಸರು | ಮಲ್ಲಪ್ಪ @ ಮರುಳಪ್ಪ |
| ವಯಸ್ಸು | 60 ವರ್ಷ |
| ಉದ್ಯೋಗ | ಎಲೆಕ್ಟ್ರೀಷಿಯನ್ |
| ವಾಸಸ್ಥಳ | ಗೊಲ್ಲರಹಟ್ಟಿ |

ಸಾಕ್ಷಿಯನ್ನು ದಿನಾಂಕ 21.08.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಆರೋಪಿಗಳು ಗೊತ್ತು. ಅವರು ಒಕ್ಕಲಿಗ ಜನಾಂಗಕ್ಕೆ ಸೇರಿರುತ್ತಾರೆ. 2 ನೇ ಆರೋಪಿ ನನ್ನ ಹೆಂಡತಿಯ ತಂದೆ. ಸುಮಾರು ಆರೇಳು ವರ್ಷಗಳ ಹಿಂದೆ ಆರೋಪಿಗಳು ಹಳೇಊರಮ್ಮ ದೇವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು. ಅವರೊಂದಿಗೆ ತಮಟೆ ಹೊಡೆಯುವವರು ಬಂದಿದ್ದರು, ಅವರು ಎಷ್ಟು ಜನರು ಇದ್ದರು ಎಂದು ಲೆಕ್ಕ ಹಾಕಿರುವುದಿಲ್ಲ. ಅವರೆಲ್ಲಾ ಟೆಂಪೊ ವಾಹನದಲ್ಲಿ ಉತ್ಸವಮೂರ್ತಿಯನ್ನು ಇಟ್ಟುಕೊಂಡು ಬಂದಿದ್ದರು. ಪೂಜೆಗೆ ಯಾರು ಅರ್ಚಕರು ಎಂದು ಗೊತ್ತಿಲ್ಲ. ಸಂಜೆ 3 – 3.30 ಗಂಟೆಗೆ ಪೂಜೆ ಮುಕ್ತಾಯವಾಗಿ ಸಂಜೆ 4.15 ಗಂಟೆಗೆ ಉತ್ಸವಮೂರ್ತಿಯನ್ನು ತೆಗೆದುಕೊಂಡು ಹೋಗಿರುತ್ತಾರೆ. ನಂತರ ನನಗೆ ಯಾವುದೇ ವಿಚಾರ ಗೊತ್ತಾಗಿರುವುದಿಲ್ಲ. ಸದರಿ ಪೂಜೆ ಮಾಡಿರುವ ಬಗ್ಗೆ ನನ್ನ ಬಳಿ ಫೋಟೋ ಅಥವಾ ದಾಖಲೆ ಇರುವುದಿಲ್ಲ. ನನ್ನನ್ನು ಕುಣಿಗಲ್ ಪೊಲೀಸರು ಕರೆಸಿ ವಿಚಾರಣೆ

ಮಾಡಿರುತ್ತಾರೆ. ಈಗ ನನಗೆ ತೋರಿಸಿದ ಭಾವಚಿತ್ರದಲ್ಲಿ ಕಾಣುವ ಟೆಂಪೊ ವಾಹನವನ್ನು ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**

2) ಆರೋಪಿಗಳೊಂದಿಗೆ ಭರತ, ರಘು, ಕುಮಾರ, ಪ್ರತಾಪರವರು ಬಂದಿದ್ದರು ಎಂದರೆ ಸಾಕ್ಷಿಯು ನನಗೆ ಅವರ ಮುಖ ಪರಿಚಯ ಇರುವುದಿಲ್ಲ ಎಂದು ನುಡಿಯುತ್ತಾರೆ. ತಮಟೆ ಹೊಡೆಯುವ ಕೆಲಸಕ್ಕೆ ತಲಾ ರೂ.500 ಕೊಡುತ್ತೇನೆಂದು ಒಪ್ಪಿಸಿದ್ದೆ ಎಂದರೆ ಸರಿಯಲ್ಲ. ಅರ್ಚಕರಾಗಿ ಕಾರ್ತಿಕ್ ಮತ್ತು ಅರುಣ್ ಕುಮಾರ್ ರವರು ಬಂದಿದ್ದರು ಎಂದರೆ ಸರಿಯಲ್ಲ. ಪೂಜೆ ಕಾರ್ಯವನ್ನು ಮುಗಿಸಿ ನಮ್ಮ ಮನೆಯಲ್ಲಿ ತಂಗಿದ್ದರು ಎಂದರೆ ಸರಿ. KA.02.B.7097 ರ ವಾಹನದಲ್ಲಿ ಆರೋಪಿತರು ಉತ್ಸವಮೂರ್ತಿಯನ್ನು ತಂದಿದ್ದರು ಎಂದರೆ ಗೊತ್ತಿಲ್ಲ.

3) ದೇವರನ್ನು ವಾಪಸ್ ತೆಗೆದುಕೊಂಡು ಬರುತ್ತಿದ್ದಾಗ ಕುಣಿಗಲ್ ತಾಲ್ಲೂಕಿನ ರಾಜೇಂದ್ರಪುರ ಗೇಟ್ ಹತ್ತಿರ ರಸ್ತೆಯಲ್ಲಿ ಸಂಜೆ 4 ಗಂಟೆಗೆ ತಮಟೆ ಬಡಿಯುವ ಭರತ್ ಕುಮಾರ್ ಮತ್ತು ನನ್ನ ಸಂಬಂಧಿ ಗಂಗಾಧರ, ನನ್ನ ಮಾವ ಚಿಕ್ಕಹೊಂಬಯ್ಯರವರು ಗಲಾಟೆ ಮಾಡಿಕೊಂಡು ಜಾತಿ ನಿಂದನೆ ಮಾಡಿರುತ್ತಾರೆಂದು 1 ನೇ ಆರೋಪಿ ಮೂಲಕ ನನಗೆ ಗೊತ್ತಾಯಿತು ಎಂದು ನಿಪಿ.11 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ

ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ : ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ